# ನಗರಸಭೆ, ಚಿಕ್ಕಮಗಳೂರು

## ಸಕ್ರಮ–2007

**ಅನಧಿಕೃತ ಅಭಿವೃದ್ಧಿ ಅಥವಾ ಕಟ್ಟಡಗಳನ್ನು ಸಕ್ರಮಗೊಳಿಸುವಿಕೆ**

ನಗರದ ನಾಗರೀಕರೇ,

ನಗರಸಭೆ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಅನಧಿಕೃತ ಬಡಾವಣೆ/ಕಟ್ಟಡಗಳ ಸಕ್ರಮಕ್ಕೆ ಕರ್ನಾಟಕ ಸರ್ಕಾರವು ಕಾನೂನನ್ನು ರೂಪಿಸಲಾಗಿದೆ. ಈ ಕಾನೂನಿನನ್ವಯ ಅನಧಿಕೃತ ಕಟ್ಟಡಗಳು, ಬಡಾವಣೆಗಳನ್ನು ನಿಯಮಾನುಸಾರ ಸಕ್ರಮಗೊಳಿಸಲು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ

1) ನಗರಸಭೆ, ಚಿಕ್ಕಮಗಳೂರು
2) ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು
3) ನಗರ ಯೋಜನೆ ಇಲಾಖೆ, ಚಿಕ್ಕಮಗಳೂರು ಇವುಗಳನ್ನು ಸಂಪರ್ಕಿಸಬಹುದು.

ಈ ಕಾನೂನನ್ವಯ ನಿಗದಿತ ನಮೂನೆಯಲ್ಲಿ ಅರ್ಜಿಸಲ್ಲಿಸಲು ದಿ: 15/09/2007 ರಿಂದ 14/12/2007 ರವರೆಗೆ ಮಾತ್ರ ಅವಕಾಶವಿರುತ್ತದೆ. ಯಾವುದೇ ಕಾರಣದಿಂದ ಈ ಅವಧಿಯನ್ನು ವಿಸ್ತರಿಸಲಾಗುವುದಿಲ್ಲ. ಈ ನಿಯಮದಡಿ ಸಕ್ರಮಗೊಳ್ಳದಿರುವ ಆಸ್ತಿಗಳಿಗೆ ನೀರುಸರಬರಾಜು ಹಾಗೂ ವಿದ್ಯುತ್ ಸಂಪರ್ಕ ಕಡಿತಗೊಳಿಸ ಬಹುದಾಗಿದೆ. ಆದ್ದರಿಂದ ಈ ಸದಾವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ನಗರದ ನಾಗರೀಕರಿಗೆ ಕೋರಲಾಗಿದೆ.

ಸಹಿ/–
ಪೌರಾಯುಕ್ತರು
ನಗರಸಭೆ, ಚಿಕ್ಕಮಗಳೂರು

# ನಗರಸಭೆ ಚಿಕ್ಕಮಗಳೂರು

# ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು

**ನಿಮ್ಮ ಸಹಾಯಕ್ಕಾಗಿಯೇ ನಾವಿಲ್ಲಿದ್ದೇವೆ**

**NOW OR NEVER**
ಇಂದು ಅಥವಾ ಇನ್ನೆಂದೂ ಇಲ್ಲ

## ಅನಧಿಕೃತ ಅಭಿವೃದ್ಧಿ ಅಥವಾ ಕಟ್ಟಡಗಳನ್ನು ಸಕ್ರಮಗೊಳಿಸುವಿಕೆ

**(ಕೆ.ಟಿ.ಸಿ.ಪಿ. ಕಾಯ್ದೆ 1961, ತಿದ್ದುಪಡಿ ಕಲಂ 76 ಎಫ್.ಎಫ್ ಹಾಗೂ ಕೆ.ಎಂ.ಎ. 1964 ರ ಕಾಯ್ದೆ 187–ಎ ಪ್ರಕಾರ)**

## ಈ ಕಾಯ್ದೆಯ ವ್ಯಾಪ್ತಿಗೊಳಪಡುವ ಪ್ರಕರಣಗಳು

1) **ಅನಧಿಕೃತ ಕಟ್ಟಡ ನಿರ್ಮಾಣಗಳು** – ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯಲ್ಲಿ.

| ಕ್ರ.ಸಂ | ಕಟ್ಟಡದ ಉಪಯೋಗ | ಉಲ್ಲಂಘನೆ ಪರಿಮಿತಿ |
|---|---|---|
| 1 | ವಸತಿ | ಶೇ.50 ರ ವರೆಗ |
| 2 | ವಸತಿಯೇತರ | ಶೇ.25 ರ ವರೆಗೆ |

2) **ಅನಧಿಕೃತ ಬಡಾವಣೆ/ಭೂ ಉಪಯೋಗ ಉಲ್ಲಂಘನೆಗಳು** – ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ / ಪ್ರಾಧಿಕಾರ ವ್ಯಾಪ್ತಿಯನ್ನು ಹೊರತು ಪಡಿಸಿದ ಪ್ರದೇಶಗಳಿಗೆ ಸ್ಥಳೀಯ ಸಂಸ್ಥೆಗಳು / ನಗರ ಯೋಜನಾ ಇಲಾಖೆ.

## ಈ ಕಾಯ್ದೆಯ ವ್ಯಾಪ್ತಿಗೊಳಪಡುವ ಅನಧಿಕೃತ ಅಭಿವೃದ್ಧಿ / ನಿರ್ಮಾಣಗಳ ಅವಧಿ

1) **ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯಲ್ಲಿ:** ದಿನಾಂಕ:**28–12–1982** ರ ನಂತರದ ಅನಧಿಕೃತ ಕಟ್ಟಡ ನಿರ್ಮಾಣಗಳು ಅಂದರೆ ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 14, 15 ಮತ್ತು 17 ಗಳಿಗೆ ಅನ್ವಯವಾಗದ ನಿರ್ಮಾಣಗಳು ಸಹ ಒಳಪಡುವುದು.
2) **ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ:** ದಿನಾಂಕ:25–09–1984ರ ನಂತರದ ಅನಧಿಕೃತ ಬಡಾವಣೆ/ ವಿಭಜನೆ/ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೊಳಪಡದ ಕಟ್ಟಡ ನಿರ್ಮಾಣಗಳು/ ಭೂ ಉಪಯೋಗ ಉಲ್ಲಂಘನೆ (1996 ರ ಅನುಮೋದನೆ ಆಗಿರುವ ಮಾಸ್ಟರ್ ಪ್ಲಾನ್ ಅನ್ವಯ. )

ಸಕ್ರಮಗೊಳಿಸುವಿಕೆಯ ನಿಗದಿತ ಅರ್ಜಿಗಳನ್ನು ದಿನಾಂಕ:15–09–07ರಿಂದ 14–12–07ರ ತನಕ ಈ ಕೆಳಗಿನ ಸ್ಥಳಗಳಲ್ಲಿ ತೆರೆದಿರುವ ವಿಶೇಷ ಕೌಂಟರ್‌ಗಳಲ್ಲಿ ನೀಡಲಾಗುವುದು ಹಾಗೂ ಸ್ವೀಕರಿಸಲಾಗುವುದು.(ಕಛೇರಿ ಕೆಲಸದ ದಿನಗಳಲ್ಲಿ ಹಾಗೂ ಕಛೇರಿ ವೇಳೆಯಲ್ಲಿ ಮಾತ್ರ )

- **ನಗರಸಭೆ, ಚಿಕ್ಕಮಗಳೂರು**
- **ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು**
- **ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು.**

**ನಿಗದಿತ ಅರ್ಜಿಯ ಬೆಲೆ : ರೂ. 50/–**

| ಸಹಿ/– | ಸಹಿ/– | ಸಹಿ/– |
|---|---|---|
| ಪೌರ ಆಯುಕ್ತರು | ಆಯುಕ್ತರು | ಜಿಲ್ಲಾಧಿಕಾರಿಗಳು |
| ನಗರಸಭೆ, | ನಗರಾಭಿವೃದ್ಧಿ ಪ್ರಾಧಿಕಾರ | ಚಿಕ್ಕಮಗಳೂರು ಜಿಲ್ಲೆ |
| ಚಿಕ್ಕಮಗಳೂರು. | ಚಿಕ್ಕಮಗಳೂರು. | ಚಿಕ್ಕಮಗಳೂರು. |